ಈ) ವೀರಯೋಧರ ಬಿ.ಕೆ. ಸುಧೀರ್ ಸ್ಮಾರಕವನ್ನು ಮಂಡ್ಯದಲ್ಲಿ ನಿರ್ಮಿಸುವ ಯಾವುದೇ ಯೋಜನೆ ಇರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಬಗ್ಗೆ

3197 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳವಾಗುತ್ತಿದೆಯೇ? ಇದರಿಂದ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಗುತ್ತಿದೆ?*

ಆ) *ಅಕ್ರಮ ವಿದ್ಯುತ್ ಸಂಪರ್ಕದಿಂದ ನಷ್ಟವಾಗಿರುವ ಹಣವನ್ನು ವಸೂಲಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು. ಕರ್ನಾಟಕ ರಾಜ್ಯದಲ್ಲಿ ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳವಾಗುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ.

ವಿದ್ಯುತ್ ಕಳವಾಗುತ್ತಿರುವುದನ್ನು ಪತ್ತೆ ಮಾಡುವುದು ಜಾಗೃತದಳದ ಪ್ರಮುಖ ಕಾರ್ಯವಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಅಂದರೆ, 1998-99 ಮತ್ತು 1999-2000 ಸಾಲಿನಲ್ಲಿ, ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳವು ಮಾಡುತ್ತಿದ್ದ 124 ಹಾಗೂ 162 ಪ್ರಕರಣಗಳನ್ನು ಜಾಗೃತ ದಳವು ಪತ್ತೆ ಮಾಡಿದ್ದು, ಇದರಿಂದ ನಿಗಮಕ್ಕೆ ಕ್ರಮವಾಗಿ 1,04,67,249-00 ರೂ.ಗಳು ಹಾಗೂ 70,98,406-00 ರೂ.ಗಳಷ್ಟು ಹಣ ನಷ್ಟವಾಗಿರುತ್ತದೆ. ಹಾಗೆಯೇ ಈ ಸಾಲಿನಲ್ಲಿ ಅಂದರೆ 2000-2001 ರಲ್ಲಿ ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳವಾಗುತ್ತಿದ್ದ 264 ಪ್ರಕರಣಗಳನ್ನು ಜಾಗೃತ ದಳವು ಪತ್ತೆ ಮಾಡಿದ್ದು, ಇದರಿಂದ ನಿಗಮಕ್ಕೆ 35,89,253-00 ರೂ.ಗಳಷ್ಟು ಹಣ ನಷ್ಟವಾಗಿರುತ್ತದೆ. ಈ ಸಂಬಂಧ ಅನುಬಂಧ 'ಅ' ಲಗತ್ತಿಸಲಾಗಿದೆ.

ಆ) ಅಕ್ರಮ ವಿದ್ಯುತ್ ಸಂಪರ್ಕದಿಂದ ನಷ್ಟವಾಗಿರುವ ಹಣವನ್ನು ವಸೂಲಿ ಮಾಡಲು, ನಿಗಮವು ಕೂಡಲೇ ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಕಡಿತಗೊಳಿಸಿ, ಕ.ವಿ.ಪ್ರ.ನಿ.ನಿ. ವಿದ್ಯುಚ್ಛಕ್ತಿ ಸರಬರಾಜು ನಿಯಮಾನುಸಾರ, ವಿದ್ಯುತ್ ಕಳ್ಳತನ ಪ್ರಮಾಣಕ್ಕೆ ದಂಡ ವಿಧಿಸಿ, ವಿದ್ಯುತ್ ಕಳ್ಳತನ ಮಾಡಿದವರಿಂದ ದಂಡ ವಸೂಲಿ ಮಾಡುತ್ತಿದೆ. ಕಳೆದ 2 ವರ್ಷಗಳಲ್ಲಿ, ಅಂದರೆ 1998-99 ಮತ್ತು 1999-2000 ಸಾಲಿನಲ್ಲಿ ಕ್ರಮವಾಗಿ 4,84,592-00 ರೂ.ಗಳಷ್ಟು ಹಾಗೂ ರೂ. 1,38,111-00ಗಳಷ್ಟು ದಂಡ ವಸೂಲಿ ಮಾಡಲಾಗಿರುತ್ತದೆ. (ಅನುಬಂಧ 'ಆ' ದಲ್ಲಿ ನಮೂದಿಸಲಾಗಿದೆ) ಹಾಗೆಯೇ ಈ ಸಾಲಿನಲ್ಲಿ ಅಂದರೆ 2000-2001 ರಲ್ಲಿ ಅಕ್ರಮ ವಿದ್ಯುತ್

ಸಂಪರ್ಕದಿಂದ ವಿದ್ಯುತ್ ಕಳವು ಮಾಡಿದವರಿಂದ 2,32,402-00 ರೂ.ಗಳಷ್ಟು ದಂಡ ವಸೂಲಿ ಮಾಡಲಾಗಿರುತ್ತದೆ.

ಇದಲ್ಲದೇ ವಿದ್ಯುತ್ ಕಳ್ಳತನ ಮಾಡಿದವರ ವಿರುದ್ಧ ಭಾರತೀಯ ವಿದ್ಯುಚ್ಛಕ್ತಿ ಕಾಯ್ದೆ 1910, ಕಲಂ 39 ಮತ್ತು 44 ರಲ್ಲಿ ಮೊಕದ್ದಮೆ ದಾಖಲು ಮಾಡಿ, ಅಪಾದಿತರನ್ನು ದಸ್ತಗಿರಿ ಮಾಡಿ, ಪ್ರಥಮ ವರ್ತಮಾನ ವರದಿ, ಪಂಚನಾಮೆ, ದೋಷಾರೋಪಣ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿ, ನ್ಯಾಯಾಲಯದ ವಿಚಾರಣೆಗೆ ಒಳಪಡಿಸಿ, ವಿದ್ಯುತ್ ಕಳ್ಳತನದಿಂದ ನಷ್ಟವಾಗಿರುವ ಹಣ ವಸೂಲಿ ಮಾಡುವ ಕಾರ್ಯ ನಿಗಮವು ನಡೆಸುತ್ತಿದೆ.

ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳವಾಗಿರುವ ಪ್ರಕರಣಗಳಲ್ಲಿ ಒಬ್ಬ ಅಧಿಕಾರಿ ಹಾಗೂ 6 ಜನ ನೌಕರರು ಶಾಮೀಲಾಗಿದ್ದು, ಇವರುಗಳನ್ನು ನಿಗಮವು ಅಮಾನತ್ತಿಲ್ಲಿಟ್ಟು ನಿಗಮ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುತ್ತಿದೆ.

ಜಾಗೃತದಳದ ಎಲ್ಲಾ ತಂಡಗಳು ದಿನನಿತ್ಯ ವಿದ್ಯುತ್ ಸ್ಥಾವರಗಳ ಪರಿಶೀಲನೆ ನಡೆಸಿ, ವಿದ್ಯುತ್ ಗಳವು ಹಾಗೂ ದುರುಪಯೋಗ ಪ್ರಕರಣಗಳನ್ನು ಪತ್ತೆ ಮಾಡುತ್ತಿದೆ. ಇದಲ್ಲದೆ ವಿದ್ಯುತ್ ಸ್ಥಾವರಗಳ ಮೇಲೆ ಅನಿರೀಕ್ಷಿತ ಹಾಗೂ ಸಾಮೂಹಿಕ ಧಾಳಿ ನಡೆಸಿ, ವಿದ್ಯುತ್ ಕಳವು ಹಾಗೂ ದುರುಪಯೋಗ ಪ್ರಕರಣಗಳನ್ನು ಪತ್ತೆ ಮಾಡಲಾಗುತ್ತಿದೆ. ಜಾಗೃತ ದಳದ ತಂಡಗಳಲ್ಲದೇ ಇತ್ತೀಚೆಗೆ ಸ್ಥಾಪಿತವಾದ ಅಧಿಕ ಸಂಪನ್ಮೂಲಗಳ ಮೇಲ್ವಿಚಾರಣೆ, ಕಂದಾಯ ಮೇಲ್ವಿಚಾರಣೆ ಎಂಬ ಹೊಸ ಘಟಕಗಳ ಅಧಿಕಾರಿಗಳು ವಿದ್ಯುತ್ ಸ್ಥಾವರಗಳಿಗೆ ಅನಿರೀಕ್ಷಿತ ಭೇಟಿ ಮಾಡಿ ವಿದ್ಯುತ್ ಕಳವು ಹಾಗೂ ದುರುಪಯೋಗ ಪ್ರಕರಣಗಳನ್ನು ಪತ್ತೆ ಮಾಡುತ್ತಿದ್ದಾರೆ. ಈ ಕ್ರಮಗಳಿಂದ ಹೆಚ್ಚು ವಿದ್ಯುತ್ ಕಳವು ಪ್ರಕರಣಗಳನ್ನು ಪತ್ತೆ ಮಾಡಲು ಸಾಧ್ಯವಾಗಿರುತ್ತದೆ.

ಅನುಬಂಧ 'ಅ'

ಅಕ್ರಮ ವಿದ್ಯುತ್ ಸಂಪರ್ಕದಿಂದ ವಿದ್ಯುತ್ ಕಳುವಾಗಿರುವ ಪ್ರಕರಣಗಳ ವಿವರಗಳು

ಕ್ರಮ ಸಂಖ್ಯೆ.	ಇಸವಿ	ಪ್ರಕರಣಗಳ ಸಂಖ್ಯೆ.	ಕಳುವಾದ ವಿದ್ಯುತ್ ಪ್ರಮಾಣ	ವಿಧಿಸಿದ ದಂಡ	ವಸೂಲಿ
			ಯೂನಿಟ್‌ಗಳು	ರೂ.	ರೂ.
1.	1998-99	124	9,73,582	1.04,67,249-00	4,84,592-00
2.	1999-2000	162	7,66,701	70,98,406-00	1.38.111-00
3.	2000-2001 ಏಪ್ರಿಲ್ 2000 ರಿಂದ ಸೆಪ್ಟೆಂಬರ್ 2000ವರೆಗೆ)	264	3,35,969	35,89,253-00	2,32,402-00
	ಒಟ್ಟು	**550**	**20,76,252**	**2,11,54,908-00**	**8,55,105-00**